‘ಬಿಸ್ಕತ್ ತಿನ್ನುವೆಯ?’ ಎಂದು ಕೇಳಿದರು.

‘ಏನಂದಿರಿ?’ ಅಂದಳವಳು ಗಟ್ಟಿಯಾಗಿ. ಆ ಗಾಳಿ ಅಬ್ಬರಕ್ಕೆ ಒಬ್ಬರು ಮಾತಾಡಿದರೆ ಇನ್ನೊಬ್ಬರಿಗೆ ಕೇಳಿಸುತ್ತಿರಲಿಲ್ಲ. ಅವರು ಹತ್ತಿರಕ್ಕೆ ಬಂದು, ಕೆಲವು ಬಿಸ್ಕತ್ತುಗಳನ್ನು ಕೊಟ್ಟರು.

‘ತಿನ್ನಲು ಇವು ಮಾತ್ರ ಇವೆ’ ಅಂದರು ರಾವು ಅವರು, ಏನೋ ತಪ್ಪು ಮಾಡಿದಂತೆ.

‘ಏನೂ ಇಲ್ಲದಿರುವುದಕ್ಕಿಂತ ಮೇಲಲ್ಲವೆ?’

ತಮ್ಮ ಜಾಗಕ್ಕೆ ಮರಳಿ ಪೆಟ್ಟಿಗೆಯ ಮೇಲೆ ಕುಳಿತರು. ಕುರ್ಚಿಗಳನ್ನು ಬಾಗಿಲಿಗೆ ಅಡ್ಡವಿರಿಸಿದರು. ಅವಳು ಕೋಣೆಯಲ್ಲಿದ್ದುದರಿಂದ ಸ್ವಲ್ಪ ಧೈರ್ಯ ಬಂದಿತು. ಯಾರೂ ಇರದಿರುವುದಕ್ಕಿಂತ ಅವಳಿರುವುದು ಕೊಂಚ ಒಳ್ಳೆಯದು. ಯಾವುದರ ಬಗ್ಗೆಯೂ ನೊಂದುಕೊಳ್ಳುವುದಿಲ್ಲ. ಗಾಳಿಮಳೆ ಬಗ್ಗೆಯೂ. ಜೀವನದಲ್ಲಿ ಕಷ್ಟನಷ್ಟಗಳು ಅವಳಿಗೆ ಅನುಭವವಾಗಿರುತ್ತವೆ. ಆದುದರಿಂದ ಅವಳು ಯಾವ ಪರಿಸ್ಥಿತಿಯನ್ನಾದರೂ ಗಾಬರಿಪಡದೆ ಎದುರಿಸಬಲ್ಲಳು.

ರಾವು ಅವರು ಗಡಿಯಾರದತ್ತ ನೋಡಿದರು. ಗಂಟೆ ಒಂಬತ್ತಾಗಿತ್ತು. ಆದರೂ ರೈಲಿನಿಂದಿಳಿದ ನಂತರ ಕೆಲವು ಯುಗಗಳು ಕಳೆದಂತೆ ಅವರಿಗೆ ಅನ್ನಿಸಿತು. ತಾನು ಮುಂದಿನ ನಿಲ್ದಾಣದ ತನಕ ಇತರೆ ಪ್ರಯಾಣಿಕರೊಡನೆ ಪ್ರಯಾಣ ಮುಂದುವರೆಸಿದ್ದರೆ ಚೆನ್ನಾಗಿತ್ತು. ದೊಡ್ಡ ಬಿರುಗಾಳಿ ಮಳೆ ಏಳುವುದೆಂದು, ತಾನಿಳಿಯುವುದು ಒಂದು ಚಿಕ್ಕ ನಿಲ್ದಾಣವೆಂದು ಆ ಗಾಬರಿಯಲ್ಲಿ ಅವರಿಗೆ ಹೊಳೆದಿರಲಿಲ್ಲ. ನಿಲ್ದಾಣದಿಂದ ಊರು ಸುಮಾರು ಎರಡು ಮೈಲು ಇದ್ದೀತು. ಊರಿಗೆ ನಿಲ್ದಾಣದಿಂದಲಾದರೂ ತಲುಪಬಹುದಿತ್ತು.

ಎಲ್ಲ ವಿಷಯಗಳನ್ನು ಕೆಲವು ಸೂತ್ರಗಳಿಂದ ಬಂಧಿಸುವುದು ಅಭ್ಯಾಸವಾಗಿದ್ದ ಅವರ ಮನಸ್ಸು, ಗಾಳಿಯ ವೇಗವನ್ನು ಕುರಿತು ಚಿಂತಿಸಿತು. ಗಾಳಿಯ ವೇಗ ಬಹುಶಃ ಗಂಟೆಗೆ ಎಂಬತ್ತು ಇಲ್ಲವೆ ನೂರು ಮೈಲಿಗಳಿದ್ದೀತು. ದೊಡ್ಡ ಭಯ ಅವರ ಮನವನ್ನು ಕವಿಯಿತು. ಈ ಕೋಣೆ ಕುಸಿಯಬಹುದು. ಹೊರಹೋಗುವ ಒಂದು ದಾರಿ ಕುರ್ಚಿಗಳಿಂದ, ಮೇಜುಗಳಿಂದ ಮುಚ್ಚಿದೆ. ಅವರು ಗಾಬರಿಯಿಂದ ತಿರುಕಿ ಕುಳಿತಿರುವ ಜಾಗಕ್ಕೆ ಓಡಿದರು.

‘ಈ ಮನೆ ಕುಸಿಯದಲ್ಲವೆ?’ ಎಂದು ಅವರು ಕೇಳಿದರು.

‘ಯಾರು ಹೇಳಿಯಾರು? ಮನೆ ಗಟ್ಟಿಯಾಗಿಯೇ ಇರುವಂತಿದೆ. ಗಾಳಿಯ ಬಲ ಹೆಚ್ಚಿದರೆ ಯಾವುದು ನಿಲ್ಲುತ್ತದೆ?’

ಅವಳ ಮಾತಿನಲ್ಲಿ ಧೈರ್ಯ ಉಂಟುಮಾಡುವುದೇನೂ ಇಲ್ಲದಿದ್ದರೂ, ಅವಳ ಧ್ವನಿಯಲ್ಲಿ ಯಾವುದೋ ಒಂದು ಸಲಿಗೆ, ಸ್ಥೈರ್ಯ ಧ್ವನಿಸಿತು. ಅವರು ಪೆಟ್ಟಿಗೆ ಬಳಿಗೆ ಹೋಗಿ ಕುಳಿತರು. ಆತ ಕುಳಿತ ಮೂಲೆಗೆ ಅವಳು ಸಹ ನಿಧಾನವಾಗಿ ಸರಿದಳು. ‘ಅಲ್ಲಿ ಕುಳಿತರೆ ಒಬ್ಬರ ಮಾತು ಒಬ್ಬರಿಗೆ ಕೇಳಿಸದು’ ಅಂದಳು.

‘ಗಾಳಿಮಳೆ ಇಷ್ಟು ಬಲಿಯುವುದೆಂದು ನಾನು ಅಂದುಕೊಳ್ಳಲಿಲ್ಲ.’

‘ಅಯ್ಯೊ, ಹಾಗೇಕೆ ಭಯಪಡುತ್ತೀರಿ? ಅಂದಳವಳು. ‘ಒಬ್ಬರಿರುವುದಕ್ಕಿಂತ ಇಬ್ಬರಿದ್ದೇವಲ್ಲವೆ! ಟಿಕೆಟ್ಟು ಕಲೆಕ್ಟರು ಕಳ್ಳಮುಂಡೆಯವನು. ರೈಲು ಹೊರಡುತ್ತಿರುವಾಗ ನನ್ನನ್ನು ಇಳಿಸಿಬಿಟ್ಟ. ಏನು ಮಾಡಲಿ? ಇಲ್ಲಿದ್ದುಬಿಟ್ಟೆ. ಆದರೂ ನನಗೇನು ಚಿಂತೆ? ಸ್ವಾಮಿಯವರು ಸುತ್ತಿಕೊಳ್ಳಲು ಒಂದು ಒಣಬಟ್ಟೆ ಕೊಟ್ಟರಿ. ಏನೋ ಅಷ್ಟು ಹಸಿವೆಗೆ ಮೇವು ಎಸೆದಿರಿ. ಮುಂದಿನ ಸ್ಟೇಷನ್ನಿನಲ್ಲಿ ಈ ಮಾತ್ರ ಸುಖವಾದರೂ ಇದ್ದೀತೆಂದು ಹೇಗೆ ಅಂದುಕೊಳ್ಳಬಲ್ಲೆ? ಇದ್ದಷ್ಟರಲ್ಲಿ ಸುಖವಾಗಿರಬೇಕು ಸ್ವಾಮಿ. ಅದಿಲ್ಲವೆಂದು, ಇದಿಲ್ಲವೆಂದು ಬೇಸರಪಟ್ಟರೆ ಏನು ಲಾಭ?’

ಅವಳ ಧ್ವನಿ ಹಾಗೆ ಮೊಳಗುತ್ತಿದ್ದರೆ, ರಾವು ಅವರ ಮನಸ್ಸು ಕೊಂಚ ಸ್ಥಿಮಿತಗೊಂಡಿತು. ಅವಳ ಭೌತಿಕ ಶರೀರವನ್ನು ನೋಡಿದರೆ ಅವರಿಗೆ ಅಸಹ್ಯ. ಅವರ ಮನಸ್ಸಿಗೆ, ಅವಳ ಮನಸ್ಸಿಗೆ ಎಷ್ಟೋ ಅಂತರವಿದೆ. ಆದರೂ ಆ ಭಯಂಕರವಾದ ರಾತ್ರಿ ಅವಳು ತನಗೆ ಜೊತೆಯಾಗಿ ಇರುವುದಕ್ಕೆ ಕೃತಜ್ಞತೆ ಅವರ ಮನಸ್ಸಿನಲ್ಲಿ ತುಂಬಿತು.

‘ನಿನಗಾರೂ ನೆಂಟರಿಲ್ಲವೆ?’ ಕೇಳಿದರು. ಕೂಡಲೇ ಇಷ್ಟು ಸಲಿಗೆಯಂದ ಪ್ರಶ್ನಿಸಿದ್ದಕ್ಕೆ ಪೇಚಾಡಿದರು. ತಾನು ರೈಲಿನಲ್ಲಿ ಅವಳಿಗೆ ಒಂದು ಚಿಕ್ಕಾಸೂ ಕೊಡದಿದ್ದುದಕ್ಕೆ ಅವಳಿಗೆ ತನ್ನ ಮೇಲೇನಾದರೂ ಕೋಪ ಇರುವುದೇನೊ ಎಂದು ಅವರ ಅನುಮಾನ. ಮಾತಿನಲ್ಲಾಗಲಿ, ಕೈಯಲ್ಲಾಗಲಿ ಕೋಪ ಕಾಣಿಸಲಿಲ್ಲ.